18. ಬಿಜಾಪುರ ಜಿಲ್ಲೆ		
1) ಬಿಜಾಪುರ 2) ತಿಕೋಟಾ 3)ಇಂಡಿ		
4) ಬಳ್ಳೋಳಿ 5) ಶಿಂದಗಿ		
6) ಬಸವನಬಾಗೇವಾಡಿ 7) ಹೂವಿನಪ್ಪರಗಿ		
8) ಮುದ್ದೇನಬಿಹಾಳ 9) ಜಮಖಂಡಿ		
10) ಮುಧೋಳ್ 11)ಬಾಗಲಕೋಟೆ		
12)ಬಿಳಗಿ 13) ಹುನಗುಂದ 14)ಬಾದಾಮಿ		
15)ಗುಳೇದಗುಡ್ಡ	180.00	126.55
19. ರಾಯಚೂರು ಜಿಲ್ಲೆ		
1) ರಾಯಚೂರು 2)ಕಲ್ಮಲ 30 ದೇವದುರ್ಗ		
4) ಲಿಂಗಸುಗೂರು 5) ಮಾನ್ವಿ 6) ಕುಷ್ಟಗಿ		
7) ಶಿಂಧನೂರು 8) ಯಲಬುರ್ಗಾ 9) ಕೊಪ್ಪಳ		
10)ಕನಕಗಿರಿ 11) ಗಂಗಾವತಿ	132.00	117.85
ಒಟ್ಟು	**2532.00**	**2208.46**

ವರದಕ್ಷಿಣೆ ಹಾಗೂ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ತಪ್ಪಿಸಲು ಕ್ರಮ

364 - ಶ್ರೀ ವಾಟಾಳ್ ನಾಗಾರಾಜ್ (ಚಾಮರಾಜನಗರ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವರದಕ್ಷಿಣೆ ಹಾಗೂ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ತಪ್ಪಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

1) ರಾಜ್ಯದಲ್ಲಿ ಹೆಚ್ಚುತ್ತಿರುವ ವರದಕ್ಷಿಣೆ ಸಾವು ಹಾಗೂ ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ತನಿಖೆ ವಿಚಾರಣೆ ನಡೆಸಲು ಸಿಐಡಿಯಲ್ಲಿ ಒಂದು ಪ್ರತ್ಯೇಕ ದಳವನ್ನು ಸರ್ಕಾರ 1989ರಲ್ಲಿ ಮಂಜೂರು ಮಾಡಿದೆ. ಈ ದಳವು ಇದುವರೆವಿಗೂ ಸುಮಾರು 450 ಕ್ಕೂ ಹೆಚ್ಚಿನ ವರದಕ್ಷಿಣೆ ಸಾವಿನ ಪ್ರಕರಣಗಳ ತನಿಖೆಯನ್ನು ಯಶಸ್ವಿಯಾಗಿ ಮಾಡಿ ಮುಗಿಸಿದೆ. ಸರ್ಕಾರವು ದಿನಾಂಕ 25-1-92ರ ತನ್ನ ಆದೇಶದಲ್ಲಿ ವರದಕ್ಷಿಣೆ ನಿಷೇಧ ದಳಕ್ಕೆ 2 ಉಪ ಆರಕ್ಷಕ ಅಧೀಕ್ಷಕರು, 11 ಮಹಿಳಾ ಪೋಲೀಸ್ ನಿರೀಕ್ಷಕರು, 4 ಪೋಲೀಸ್ ನಿರೀಕ್ಷಕರುಗಳ ಹೆಚ್ಚಿನ ಹುದ್ದೆಗಳನ್ನು ಇತರ ಸಲಕರಣೆಗಳೊಂದಿಗೆ ಮಂಜೂರು ಮಾಡಿದೆ.

2) ವರದಕ್ಷಿಣೆ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಕರಣಗಳ ವಿಚಾರಣೆಗಾಗಿ, ಬೆಂಗಳೂರಿನಲ್ಲಿ ಒಂದು ವಿಶೇಷ ನ್ಯಾಯಾಲಯವನ್ನು 1990ರ ಆಗಸ್ಟ್ ತಿಂಗಳಿನಲ್ಲಿ ಸ್ಥಾಪಿಸಲಾಗಿದೆ. ಇದು ಪ್ರಕರಣಗಳ ಶೀಘ್ರ ವಿಲೇವಾರಿಗೆ ಬಹಳ ಸಹಾಯಕಾರಿಯಾಗಿದೆ.

3) 1992ರಲ್ಲಿ ಈ ನ್ಯಾಯಾಲಯವು 8 ಪ್ರಕರಣಗಳಲ್ಲಿ ಸಂಬಂಧಪಟ್ಟ ಆರೋಪಿಗಳಿಗೆ ಶಿಕ್ಷೆಯನ್ನು ವಿಧಿಸಿದೆ. ಈ ಶಿಕ್ಷೆಯ ಪ್ರಮಾಣವು ಜೀವಾವಧಿ ಶಿಕ್ಷೆಯೂ ಸೇರಿದಂತೆ 7ರಿಂದ 3 ವರ್ಷಗಳ ಅವಧಿಯವರೆಗೆ ಆಗಿರುತ್ತದೆ.

4) ಮಹಿಳೆಯ ಮೇಲಿನ ದೌರ್ಜನ್ಯದ ಪ್ರಕರಣಗಳ ವಿಶ್ಲೇಷಣೆ ನಡೆಸಿ,ಸೂಕ್ತ ಸಲಹೆಗಳನ್ನು ನೀಡಲು ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದ್ದು, ಸರ್ಕಾರದ ಕಾನೂನು ಕಾರ್ಯದರ್ಶಿಯವರು ಇದರ ಮುಖ್ಯಸ್ಥರಾಗಿರುತ್ತಾರೆ. ಪೋಲೀಸ್ ಮಹಾ ನಿರ್ದೇಶಕರು ಸರ್ಕಾರದ ಒಳಾಡಳಿತ ಇಲಾಖೆಯ ಕಾರ್ಯದರ್ಶಿಯವರು ಮತ್ತು ಅಭಿಯೋಗ ನಿರ್ದೇಶಕರು ಈ ಸಮಿತಿಯ ಸದಸ್ಯರಾಗಿರುತ್ತಾರೆ.

5) ಮಹಿಳೆಯರ ಮೇಲಿನ ದೌರ್ಜನ್ಯಗಳು ಮತ್ತು ವರದಕ್ಷಿಣೆ ಸಾವಿರ ಪ್ರಕರಣಗಳನ್ನು ತನಿಖೆ ಮಾಡುವ ಪೋಲೀಸ್ ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮಗಳು, ಚರ್ಚಾಕೂಟಗಳನ್ನು ಏರ್ಪಡಿಸಿದ್ದು, ಸಮಾಜ ಸೇವಕರು, ವೈದ್ಯಕೀಯ ವೃತ್ತಿಯವರು, ಕಾನೂನು ಪರಿಣಿತರನ್ನು ಕರೆಯಿಸಿ ಉಪನ್ಯಾಸ ನೀಡಲಾಗುತ್ತಿದೆ. ಹಾಗೂ ವರದಕ್ಷಿಣೆ ಪಿಡುಗಿನ ಬಗ್ಗೆ ಸಮಾಜವನ್ನು ಎಚ್ಚರಗೊಳಿಸಲಾಗುತ್ತಿದೆ.

6) ಮಹಿಳೆಯರ ಮೇಲಿನ ದೌರ್ಜನ್ಯಗಳಲ್ಲಿ ನ್ಯಾಯಾಲಯವು ಆರೋಪಿಗಳಿಗೆ ಶಿಕ್ಷೆ ವಿಧಿಸಿದ ಬಗ್ಗೆ ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ನೀಡಲಾಗುತ್ತಿದೆ.

7) ವರದಕ್ಷಿಣೆ ಸಾವಿನ ಪ್ರಕರಣಗಳನ್ನು ಘೋರ ಅಪರಾಧವೆಂದು ಪರಿಗಣಿಸಿ ಇಲಾಖೆಯ ಉನ್ನತ ಅಧಿಕಾರಿಗಳ ಅಂದರೆ ಡಿವೈಎಸ್‌ಪಿ ದರ್ಜೆಯ ಅಧಿಕಾರಿಗಳಿಂದ ತನಿಖೆಯನ್ನು ನಡೆಸಲಾಗುತ್ತಿದೆ.

8) ವರದಕ್ಷಿಣೆ ಸಮಸ್ಯೆಗಳ ನಿವಾರಣೆಗಾಗಿ ಪೋಲೀಸ್ ಇಲಾಖೆಯ ಅಧಿಕಾರಗಳ, ಅಭಿಯೋಜಕರುಗಳು ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಗಾಗ ಸಭೆ ಸೇರಿ ಚರ್ಚಿಸಿ, ಸುಧಾರಣಾ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿ ಚುನಾವಣೆ

363-ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಜಿಲ್ಲಾ ಪರಿಷತ್, ಮಂಡಲ ಪಂಚಾಯ್ತಿ ಚುನಾವಣೆಗಳನ್ನು ನಡೆಸುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಸರ್ಕಾರದ ಪರಿಶೀಲನೆಯಲ್ಲಿದೆ.

ಪ್ರತಿಹಳ್ಳಿಗೂ ಒಳಚರಂಡಿ, ಕುಡಿಯುವ ನೀರಿನ ವ್ಯವಸ್ಥೆ

364-ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟುಉತ್ತರಿಸುವರೆ ?

ಅ) ಸರ್ಕಾರವು ಪ್ರತಿ ಹಳ್ಳಿಗಳಲ್ಲೂ ಈ ಕೆಳಗಿನ ವ್ಯವಸ್ಥೆಗಳಿಗೆ ವಿಶೇಷ ಯೋಜನೆಯನ್ನು ಹಾಕಿಕೊಂಡಿರುವುದೆ ?